INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -3, May--June, 2025
PageNo,36-43
Peer -Reviewed, Refereed Journal

# ‘ಇಂದಿರಾಬಾಯಿ” ಮತ್ತು ‘ಇಂದಿರಾ” ಕಾದಂಬರಿಗಳಲ್ಲಿ ಮಹಿಳೆ

ಪಲ್ಲವಿ.ಎ.ಜಿ.[1]
ಡಾ.ಎನ್.ಎಂ.ತಳವಾರ.[2]

ಆಧುನಿಕ ಕನ್ನಡ ಸಾಹಿತ್ಯದ ಆರಂಭದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದ ಸಾಹಿತ್ಯ ಪ್ರಕಾರ ಕಾದಂಬರಿ. ಸಾಹಿತ್ಯವನ್ನು ಶ್ರೀಸಾಮಾನ್ಯನ ಬಳಿಗೆ ತಂದ ಸಾಧನೆ ಕಾದಂಬರಿಯದ್ದು. ಕನ್ನಡದಲ್ಲಿ ಮೊದಲ ಕಾದಂಬರಿ ರಚನೆಗೊಂಡದ್ದು ಸಾಮಾಜಿಕ ವಿಡಂಬನೆಯ ಮೂಲಕ. ಈ ನಿಟ್ಟಿನಲ್ಲಿ ಓದುಗ ವಲಯಕ್ಕೆ ಮೊಟ್ಟಮೊದಲ ಬಾರಿಗೆ ವಾಸ್ತವ ಮತ್ತು ಕಾಲ್ಪನಿಕ ಪ್ರಪಂಚದ ದರುಶನವಾಯಿತು. ಕನ್ನಡ ಕಾದಂಬರಿಯ ಮೊದಲ ಹಂತದ ಬೆಳವಣಿಗೆಯನ್ನು ನೋಡಿದರೆ ಮಹಿಳಾ ಜೀವನವನ್ನು ಕುರಿತ ಕಾದಂಬರಿಗಳೆ ಹೆಚ್ಚಾಗಿ ರಚನೆಯಾಗಿವೆ. ಡಿ. ಆರ್. ನಾಗರಾಜ್ ಅವರು ‘ಕನ್ನಡದ ಮೊದಲ ಕಾದಂಬರಿಗಳಲ್ಲಿ ಆದರ್ಶ ಮತ್ತು ವಾಸ್ತವ, ಸಾಹಿತ್ಯ ಕಥನ’ ಎಂಬ ಪುಸ್ತಕದಲ್ಲಿ ಹೇಳಿರುವಂತೆ “ಕನ್ನಡದಲ್ಲಿ ಸಾಮಾಜಿಕ ಕಾದಂಬರಿ ಅನ್ನುವುದು ಹುಟ್ಟಿದ್ದು ಒಂದು ನಿರ್ದಿಷ್ಟ ಸಾಮಾಜಿಕ ಗುಂಪಿನ ಸ್ವ–ವಿಮರ್ಶೆಯಿಂದ ಬ್ರಾಹ್ಮಣರ ಸ್ವ ವಿಮರ್ಶೆಯಿಂದ” ಎನ್ನುವ ಮಾತು ಸತ್ಯ.ಏಕೆಂದರೆ ಕನ್ನಡದಲ್ಲಿ ಮೊದಲು ರಚನೆಗೊಂಡ ಬಹುಪಾಲು ಕಾದಂಬರಿಗಳು ಬ್ರಾಹ್ಮಣರ ಜೀವನದ ನಿರೂಪಣೆಯೇ ಆಗಿವೆ.ಅದರಲ್ಲೂ ಮುಖ್ಯವಾಗಿ ಬ್ರಾಹ್ಮಣ ಮಹಿಳೆಯರ ಸಮಸ್ಯೆಯನ್ನೇ ಕೇಂದ್ರವಾಗಿಟ್ಟುಕೊಂಡು ಮಹಿಳಾ ನಾಮವಾಚಿಗಳನ್ನೇ ಹೊದ್ದು ರಚನೆಗೊಂಡಿವೆ. ಅಂತಹುಗಳ ಸಾಲಿನಲ್ಲಿ ‘ಇಂದಿರಾಬಾಯಿ’ ಮತ್ತು ‘ಇಂದಿರಾ’ ಕಾದಂಬರಿಗಳೂ ಸೇರುತ್ತವೆ.

ಇಂದಿರಾಬಾಯಿ ಮತ್ತು ಇಂದಿರಾ ಕಾದಂಬರಿಗಳೆರಡೂ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹಲವು ಕಾರಣಗಳಾಗಿ ಮಹತ್ವವನ್ನು ಪಡೆದಿವೆ. ಇಂದಿರಾಬಾಯಿಯನ್ನು 1899ರಲ್ಲಿ ಗುಲ್ವಾಡಿ ವೆಂಕಟರಾಯರು ರಚನೆ ಮಾಡಿದ್ದು, ಇದು ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿಯಾಗಿದೆ. ಹಾಗೇಯೇ ‘ಇಂದಿರಾ’ ಕಾದಂಬರಿಯನ್ನು 1908ರಲ್ಲಿ ಕೆರೂರು ವಾಸುದೇವಾಚಾರ್ಯರು ರಚನೆ ಮಾಡಿದರು. ಇದು ಕನ್ನಡದ ನಾಲ್ಕನೇ ಸಾಮಾಜಿಕ ಕಾದಂಬರಿ ಮತ್ತು ಉತ್ತರ ಕರ್ನಾಟಕದ ಮೊದಲ ಸಾಮಾಜಿಕ ಕಾದಂಬರಿ ಎಂದು

---

1. ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
2. ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.

ಗುರುತಿಸಲ್ಪಟ್ಟಿದೆ. ಎರಡೂ ಕಾದಂಬರಿಗಳು ಮಹಿಳಾ ನಾಮವಾಚಿಗಳನ್ನೇ ಹೊಂದಿವೆ. ಎರಡೂ ಕಾದಂಬರಿಗಳಲ್ಲಿ ಮಹಿಳೆಯ ಸಮಸ್ಯೆಯೇ ಕೇಂದ್ರ. ಎರಡೂ ಕಾದಂಬರಿಗಳ ನಾಯಕಿಯರ ಹೆಸರು 'ಇಂದಿರಾಬಾಯಿ'. ಎರಡೂ ಕಾದಂಬರಿಗಳ ವಸ್ತುಕೂಡ ಒಂದೇ. ಆದರೆ ಅದನ್ನು ಚಿತ್ರಿಸಿರುವ ರೀತಿಯಲ್ಲಿ ಅಲ್ಪಮಟ್ಟಿನ ವ್ಯತ್ಯಾಸವಿದೆ. ಎರಡು ಕಾದಂಬರಿಗಳಲ್ಲಿಯೂ ಪರಂಪರೆ ಸವಾಲಾಗಿ ನಿಲ್ಲುತ್ತದೆ. ಒಂದು ದಾಟಿ ನಡೆಯಲು ಇಚ್ಛಿಸಿದರೆ, ಮತ್ತೊಂದು ಪರಂಪರೆಯ ಜಾಡನ್ನು ಮತ್ತೂ ಬಿಡದೆ ನಡೆಯಲು ಬಯಸುತ್ತದೆ. 'ಇಂದಿರಾಬಾಯಿ' ಕಾದಂಬರಿ ಆಧುನಿಕ ವೈಚಾರಿಕತೆಯ ಸಮರ್ಥನೆಯಾಗಿ, 'ಇಂದಿರಾ' ಕಾದಂಬರಿ ಪರಂಪರೆಯ ನೇರ ಸಮರ್ಥನೆ ಮತ್ತು ಆಧುನಿಕ ಮನೋಭಾವದ ಸ್ವೀಕಾರ–ನಿರಾಕಾರ ಎರಡೂ ಪ್ರಕ್ರಿಯೆಗಳ ಮಿಲನವಾಗಿ ನಿಲ್ಲುತ್ತವೆ.

'ಇಂದಿರಾಬಾಯಿ' ಕಾದಂಬರಿ ವಾಸ್ತವ ಮತ್ತು ಆದರ್ಶದ ನೆಲೆಯಲ್ಲಿ ಜೀವನದ ಹೂರಣವಾದರೆ, 'ಇಂದಿರಾ' ಕಾದಂಬರಿ ಸಂಪೂರ್ಣ ಆದರ್ಶದ ನೆಲೆಯಲ್ಲಿಯೇ ಚಿತ್ರಿತಗೊಂಡಿರುವ ಪ್ರೇಮಪುರಾಣ ಎಂದೆನಿಸುತ್ತದೆ. ಎರಡೂ ಕಾದಂಬರಿಗಳಲ್ಲಿ ವಿಧವಾ ಸಮಸ್ಯೆ, ವಿಧವೆಯ ಮರುಮದುವೆ, ಸ್ತ್ರೀ ಶಿಕ್ಷಣ, ಬಾಲ್ಯ ವಿವಾಹದ ವಿರೋಧ, ವಿಧವಾವಪನದ ವಿರೋಧಗಳೇ ಚರ್ಚಿತ ವಿಷಯಗಳು. ಇಂದಿರಾಬಾಯಿ ಕಾದಂಬರಿ ಆರಂಭಗೊಳ್ಳುವುದು ಭೀಮರಾಯ ಮತ್ತು ಅಂಬಾಬಾಯಿ ಸತಿಪತಿ ಪಾತ್ರಗಳಿಂದ. ಈ ಪಾತ್ರಗಳು ಆರಂಭದಿಂದ – ಅಂತ್ಯದವರೆಗೆ ಹೀನಕೃತ್ಯಗಳಿಗೆ ಪ್ರತೀಕವಾದ ಖಳನಾಯಕರು. ಇವರಿಗಿದ್ದ ಧರ್ಮದ ಸೋಗು, ಮಠದ ರಕ್ಷಣೆ, ದುಡ್ಡಿನ ಬಲದಿಂದ 'ಧರ್ಮವಂತರು' ಎಂಬ ಪಟ್ಟಕ್ಕೆ ಬಂದು ನಿಲ್ಲುತ್ತಾರೆ. ಸುಂದರರಾಯ ಎಂಬ ಬಡವನನ್ನು ಸಣ್ಣ ಕಾರಣಕ್ಕೆ ಕೊಲೆ ಮಾಡಿಯೂ ಅಪರಾಧದಿಂದ ಹೊರಬಂದು 'ಸತ್ಯವೇ ಜಯ' ಎಂಬ ಮಾತನ್ನು ಭೀಮರಾಯನಿಂದ ಕೇಳಿದಾಗ ಓದುಗರಿಗೆ ದುಖಃವನ್ನು, ಬೇಸರವನ್ನು ತರುತ್ತದೆ. ಈ ಎಲ್ಲಾ ಅನಾಹುತಗಳಿಗೆ ಕಾರಣ ಅಂಬಾಬಾಯಿ. ಈಕೆಯ ಸ್ವಾರ್ಥ, ಮೌಢ್ಯತೆ, ಅಟ್ಟಹಾಸ ಸುಂದರರಾಯನನ್ನು ಬಲಿ ತೆಗೆದುಕೊಳ್ಳುತ್ತದೆ. ತನ್ನ ಬಾಳಲಕ್ಷ್ಮೀ ಎಂದು ಕುರುಡಾಗಿ ನಂಬುವ ಭೀಮರಾಯ, ಅಂಬಾಬಾಯಿಯ ಎಲ್ಲ ದುರ್ನಡತೆಯನ್ನ, ಕ್ರೌರ್ಯವನ್ನ ಬೆಂಬಲಿಸಿ ಅದರಂತೆ ನಡೆಯುವುದು ಆತನ ಮೂರ್ಖತನವೇ ಸರಿ ಎನಿಸುತ್ತದೆ. ಅಂಬಾಬಾಯಿಯ ಕೃತಿಯಾಗಿ ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಪಾತ್ರ 'ದೇವಕಿ'. ಈಕೆಯ ಮಾಟ– ಮಂತ್ರ, ಮನೆಮದ್ದುಗಳ ಕಾರಣದಿಂದ ಊರ ಜನರಿಗೆ ಉಳಿವಿಲ್ಲ. ಆದರೂ ಕಾನೂನಿನ ದೃಷ್ಟಿಯಲ್ಲಿ ಈ ಮೂವರು ನಿರಾಪರಾಧಿಗಳು. ಇಂತಹ ಪಾತ್ರಗಳ ನಡುವೆ ಸುಶೀಲೆ, ಜಲಜಾಕ್ಷಿ, ಇಂದಿರೆ ನೀತಿಯನ್ನು, ಮಾನವಪ್ರೇಮವನ್ನು, ಸತ್ಯಮಾರ್ಗವನ್ನು ರೂಢಿಸಿಕೊಂಡ ಆದರ್ಶ ಪಾತ್ರಗಳಾಗಿ ನಿಲ್ಲುತ್ತಾರೆ. ಸುಶೀಲೆ, ಗಂಡ ಸುಂದರರಾಯ ಕೊಲೆಯಾದ ನಂತರ ಮಗ ಭಾಸ್ಕರನ ಅಭ್ಯುದಯಕ್ಕಾಗಿ ಮಿಡಿಯುತ್ತಾಳೆ. ಜಲಜಾಕ್ಷಿಗೆ ಮಕ್ಕಳಿಲ್ಲದ ಕಾರಣ ಭಾಸ್ಕರ ಮತ್ತು ಇಂದಿರೆಯರಲ್ಲಿ ಮಕ್ಕಳನ್ನು ಕಂಡು

ಅವರ ಸುಖದಲ್ಲಿ ತಾನು ಸುಖಿಸುತ್ತಾಳೆ. ಇಂದಿರೆ ಮೂಢನಂಬಿಕೆಗಳ ನಡುವೆ ಇದ್ದಾಗ್ಗೆಯೂ ಅದರ ಪ್ರಭಾವಕ್ಕೆ ಒಳಗಾಗದೆ ಅದರಿಂದ ಹೊರ ಬರುವ ದಾರಿಯನ್ನು ಹುಡುಕುತ್ತಾಳೆ. ಮತ್ತು ಯಶ್ವಸಿಯು ಆಗುತ್ತಾಳೆ. ಇಂದಿರೆಯ ಈ ನಿರ್ಧಾರವೆ ಸಮಾಜದ ಹೊಸಕ್ರಾಂತಿಗೆ ಕಾರಣವಾಗಿ ಮಹಿಳೆಯರಿಗೆ ದಾರಿಯಾಗಿ ಕಾಣಿಸುತ್ತಾಳೆ.

ಕಾದಂಬರಿಯ ಅರ್ಧಭಾಗದಲ್ಲಿ ಪ್ರವೇಶ ಪಡೆಯುವ 'ಇಂದಿರಾಬಾಯಿ' ಕಾದಂಬರಿಯ ಕೇಂದ್ರ ಪಾತ್ರ. ಈ ಪಾತ್ರದ ಪ್ರವೇಶದೊಂದಿಗೆ ಸಾಂಪ್ರದಾಯಿಕ ಮೌಲ್ಯ–ಅಪಮೌಲ್ಯಗಳ ಚರ್ಚೆ, ಟೀಕೆ, ವಿಡಂಬನೆ ಆರಂಭವಾಗುತ್ತದೆ. ಬಾಲ್ಯವಿವಾಹಕ್ಕೆ ಒಳಗಾದ ಇಂದಿರಾಬಾಯಿ, ಅಷ್ಟೇ ವೇಗವಾಗಿ ವಿಧವೆಯ ಪಟ್ಟವನ್ನು ಪಡೆಯುತ್ತಾಳೆ. ಗಂಡ ವಿಠಲರಾಯ ಸ್ತ್ರೀ ವ್ಯಸನಿಯಾಗಿ ಅಕಾಲ ಮರಣ ಹೊಂದುತ್ತಾನೆ. ಈ ಘಟನೆಯ ನಂತರ ನೇರವಾಗಿ ಪರಂಪರೆಯಲ್ಲಿದ್ದ ಅಪಮೌಲ್ಯಗಳನ್ನು, ಅರ್ಥಹೀನ ಆಚರಣೆಗಳನ್ನು ಕಾದಂಬರಿಕಾರರು ನಿರಾಕರಿಸುತ್ತಾ ಆಧುನಿಕತೆಯ ಮೌಲ್ಯಗಳನ್ನು ಅಪ್ಪಿಕೊಳ್ಳುತ್ತಾರೆ. ವಿಠಲರಾಯನು ತೀರಿದಾಗ ತಾಯಿ ಅಂಬಾಬಾಯಿ ಸೀರೆಯ ಸೆರಗಿನಿಂದ ಉಪಾಯ ಮಾಡಿ ಇಂದಿರಾಬಾಯಿಯ ಹಣೆಯ ಬೊಟ್ಟನ್ನು ಉಜ್ಜಿ ತೆಗೆಯುತ್ತಾಳೆ. ಇಂದಿರಾ ಆ ಚಮತ್ಕಾರವನ್ನು ಕಂಡು " ಏಕವ್ವಾ, ನಾನೇ ಉಜ್ಜಿ ತೆಗೆಯುತ್ತಿದ್ದನಷ್ಟೇ? ನನಗಿನ್ನೇಕೆ ಬೊಟ್ಟು? "ಎನ್ನುವ ಆಕೆಯ ದನಿಯಲ್ಲಿ ಆಕ್ರೋಶದೊಂದಿಗೆ ತಿರಸ್ಕಾರಭಾವ ವ್ಯಕ್ತವಾಗುತ್ತದೆ. ತವರುಮನೆಯಲ್ಲಿಯೇ ಉಳಿದ ಇಂದಿರೆ ತಾಯಿ ಅಂಬಾಬಾಯಿಯ ಪರಂಪರೆಯ ನಂಬಿಕೆಯ ಕಾರಣದಿಂದ ಮಾನಸಿಕವಾಗಿ ಕಿರುಕುಳವನ್ನು ಅನುಭವಿಸುತ್ತಾಳೆ. ವಿಧವೆ ತಲೆಗೆ ಎಣ್ಣೆ ಹಚ್ಚಬಾರದು, ತಲೆಬಾಚಬಾರದು, ಕುಪ್ಪಸ ತೊಡಬಾರದು, ಪರಪುರುಷರ ಮುಂದೆ ಬರಬಾರೆಂಬುದು; ಧಾರ್ಮಿಕ ಕೃತಿಗಳನ್ನು ಓದಬೇಕೆಂಬುದೇ ಮೊದಲಾದ ನಿಯಮಗಳು ಅವಳಲ್ಲಿ ಜಿಗುಪ್ಸೆಯನ್ನು ಉಂಟುಮಾಡುತ್ತವೆ. ಇಂತಹ ಸನ್ನಿವೇಶದ ನಡುವೆಯೂ ನೀತಿ ಕಥೆಗಳನ್ನು, ಪಂಚತಂತ್ರ ಕಥೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುತ್ತಾಳೆ. ಇದರ ಕಾರಣದಿಂದ ತಾಯಿ ಅಂಬಾಬಾಯಿ ಹೆದರಿ ಸಂತಮಂಡಲಿಯನ್ನು ಮನೆಗೆ ಕರೆಸಿ ವೈರಾಗ್ಯ ಬೋಧನೆಯನ್ನು ಏರ್ಪಡಿಸುತ್ತಾಳೆ. ಪರಿಣಾಮವಾಗಿ ಮಠದ ಅಧ್ಯಕ್ಷ ರಂಗಪ್ಪನಿಂದ ಇಂದಿರಾಬಾಯಿ ದೌರ್ಜನ್ಯಕ್ಕೆ ಒಳಗಾಗುವ ಸಂದರ್ಭ ಬರುತ್ತದೆ .ಈ ವಿಷಮ ಪರಿಸ್ಥಿತಿಯಲ್ಲಿ ಜಾಣತನದಿಂದ ತಪ್ಪಿಸಿಕೊಂಡ ಇಂದಿರಾಬಾಯಿ, ವಕೀಲಿ ವೃತ್ತಿಯಲ್ಲಿ ಪ್ರಸಿದ್ಧಿ ಪಡೆದಿದ್ದ ಅಮೃತರಾಯ ಮತ್ತು ಜಲಜಾಕ್ಷಿಯಲ್ಲಿ ಆಶ್ರಯ ಪಡೆಯುತ್ತಾಳೆ. ನಂತರ ಅವರ ಸಹಾಯದಿಂದಲೇ ಮೆಟ್ರಿಕ್ ಪರೀಕ್ಷೆ ಪಾಸು ಮಾಡುತ್ತಾಳೆ. ಆಧುನಿಕ ಶಿಕ್ಷಣದ ಪ್ರಭಾವಕ್ಕೆ ಒಳಗಾದ ಇಂದಿರಾಬಾಯಿಯಲ್ಲಿ ಜೀವನದ ಉತ್ಸಾಹ ಮತ್ತು ಜೀವನ ವಿಮರ್ಶೆಗಳೆರಡು ಒಟ್ಟಿಗೆ ಮಿಲನಗೊಳ್ಳುತ್ತವೆ. ...."ಒಬ್ಬ ಪುರುಷನಿಗೆ ಎಷ್ಟು ಸಾರಿಯಾದರೂ ಮದುವೆಯಾಗಬಹುದುದಂತೆ ಸ್ತ್ರೀಗೇಕಾಗಕೂಡದು? ಒಬ್ಬ ಸ್ತ್ರೀಯು ಪತಿಯ ಮರಣಾನಂತರ ತಲೆ ಬೋಳಿಸಿ ರೂಪ–ವಿರೂಪ ಮಾಡಿ

ಸನ್ಯಾಸದಲ್ಲಿರಬೇಕೆಂತೆ, ಪುರುಷನು ಪತ್ನಿಯ ಮರಣಾನಂತರ ತಲೆ, ಗಡ್ಡ–ಮೀಸೆ ಬೋಳಿಸಿ, ಏಕೆ ಸನ್ಯಾಸಿಯಾಗಬಾರದು?"ಎಂಬ ಆಕೆಯ ಪ್ರಶ್ನೆ ಪುರುಷ ಸಮಾಜ ವ್ಯವಸ್ಥೆಯ ತಾರತಮ್ಯವನ್ನ, ಅರ್ಥಹೀನ ಆಚರಣೆಗಳನ್ನು ಬುಡಮೇಲು ಮಾಡುವಂತದ್ದು. "ನ್ಯಾಯವು ಎಲ್ಲರಿಗೂ ಏಕ ಪ್ರಕಾರವಿರಬೇಕು. ಕೆಲವರು ಇಂತಹ ಪ್ರಕಾರವೇ ಯೋಗ್ಯವಾಗಿ ನಡೆಯಬೇಕೆಂದು ಅವರನ್ನು ನೀವು ಬಲಾತ್ಕರಿಸುವುದಾದರೆ, ಬೇರೆಯವರಿಗೂ ಹಾಗೆಯೇ ಬಲಾತ್ಕರಿಸಬೇಕು; ಎನ್ನುವ ಮಾತುಗಳಲ್ಲಿ ಸಮಾನತೆ ಎನ್ನುವುದು ಏಕಪ್ರಕಾರವಾಗಿದ್ದಾಗ ಮಾತ್ರವೇ ಸಮಾಜದ ಆರೋಗ್ಯ ಸಾಧ್ಯವಾಗುತ್ತದೆ. ಎಲ್ಲರೂ ಒಂದೇ ರೀತಿಯ ಬಾಳ್ವೆಗೆ ಅರ್ಹರು .ಪುರುಷ– ಸ್ತ್ರೀಯರಲ್ಲಿ ಯಾವುದೇ ರೀತಿ ಭೇದ–ಭಾವ, ಹೆಚ್ಚುಗಾರಿಕೆ ಕಾಣಲು ಹೇಗೆ ಸಾಧ್ಯ? ಎನ್ನುವ ಇಂದಿರಾಬಾಯಿಯ ಆಧುನಿಕ ದೃಷ್ಟಿಕೋನ ಸ್ವಾಗತಾರ್ಹ. ಇಲ್ಲವಾದರೆ ಸಂತಬಾಳಪ್ಪನಂತಹ ಮಠದ ಸ್ವಾಮಿಗಳು 'ಕಲ್ಯಾಣಿ'ಯಂತಹ ಮುಗ್ಧ ವಿಧವೆಯರನ್ನು ತಮ್ಮ ಆಸೆಗೆ ಬಳಸಿಕೊಂಡು ಸಮಾಜದ ಸ್ವಾಸ್ಥ್ಯಕ್ಕೆ ಮಾರಕ: ಜೊತೆಗೆ ಮಹಿಳೆಯರ ಬದುಕಿನಲ್ಲಿ ಮುಳುವಾಗುವುದು ಖಂಡಿತ ಎಂಬುದಾಗಿ ಕಾದಂಬರಿ ಪರಂಪರೆಯ ಹೆಸರಿನಲ್ಲಿ ನಡೆಯುತ್ತಿದ್ದ ಅನಾಚಾರ, ಡಾಂಭಿಕತೆಗಳನ್ನ ಟೀಕೆಗೆ ಒಳಗು ಮಾಡುತ್ತದೆ. ಇಂತಹ ಪಾತ್ರಗಳ ನಡುವೆ ಅಮೃತರಾಯ ಮತ್ತು ಜಲಜಾಕ್ಷಿಯರ ಆಧುನಿಕತೆಯ ಮನೋಭಾವ ನೈಜ ಮಾನವೀಯ ಧರ್ಮವಾಗಿ ರೂಪುಗೊಂಡಿದೆ. ಇವರ ಉದಾರತನ ಇಂದಿರಾಬಾಯಿ ಮತ್ತು ಭಾಸ್ಕರರಾಯರ ಮದುವೆಯೊಂದಿಗೆ ಕಾದಂಬರಿ ಅಂತ್ಯದಲ್ಲಿ ಯಶಸ್ವಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಹೀಗೆ ಕಾದಂಬರಿಯಲ್ಲಿ ವಿಧವೆಯ ಸಮಸ್ಯೆಯೇ ಮುಖ್ಯ ಭೂಮಿಕೆಯಾಗಿ ಇದರ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಪರಂಪರೆಯ ಟೊಳ್ಳುತನವನ್ನು ಬದಲಾಯಿಸುವ ಪ್ರಯತ್ನ ಕಾದಂಬರಿಯಲ್ಲಿ ನೆಡೆದಿದೆ. ಹಾಗೆಯೇ ವಿಧವೆಯ ಮರುಮದುವೆಯ ಅವಶ್ಯಕತೆಯನ್ನು ಸಾರಿ ಹೇಳುತ್ತದೆ. ಸಮಾಜದ ಎಲ್ಲಾ ವಿಧವೆಯರ ಪ್ರತೀಕವಾಗಿ ನಿಂತ ' ಇಂದಿರಾಬಾಯಿ' ಸಂಪ್ರದಾಯದಲ್ಲಿದ್ದ ಅನಗತ್ಯವಾದ ನಂಬಿಕೆಗಳನ್ನು ತೂರಿ, ಆಧುನಿಕ ಶಿಕ್ಷಣವನ್ನು ಪಡೆದಾಗ್ಗೆಯೂ ವೈಯಕ್ತಿಕ ಧರ್ಮದಲ್ಲಿದ್ದ ನೈತಿಕತೆಯನ್ನ ಬಿಡದೆ ಉತ್ತಮಳಾಗಿ ಮೆರೆದದ್ದು ಕ್ರಾಂತಿಯೇ ಸರಿ. ಇದರೊಟ್ಟಿಗೆ ಭಾಸ್ಕರರಾಯನಿಗೆ ಅಮೃತರಾಯ ಮತ್ತು ಜಲಜಾಕ್ಷಿ ಮಾಡಿದ ಸಹಾಯ ಉಪಾಕಾರ ಎನಿಸಿದರೆ, ಇಂದಿರಾಬಾಯಿಯನ್ನು ಆದರಿಸುವ ರೀತಿ ಆದರ್ಶವಾಗಿ ನಿಲ್ಲುತ್ತದೆ.

'ಇಂದಿರಾಬಾಯಿ' ಕಾದಂಬರಿಯ ಮುಂದುವರಿಕೆಯ ರೂಪವಾಗಿ ಕೆರೂರು ವಾಸುದೇವಾಚಾರ್ಯರ 'ಇಂದಿರಾ' ಕಾದಂಬರಿ ನಿರೂಪಣೆಗೊಳ್ಳುತ್ತದೆ.ಆದರೆ ಈ ಕಾದಂಬರಿಯಲ್ಲಿ ಒಂದು ಸಣ್ಣ ಬದಲಾವಣೆಯನ್ನು ನೋಡಲು ಸಾಧ್ಯ. 'ಇಂದಿರಾಬಾಯಿ' ಕಾದಂಬರಿಗು 'ಇಂದಿರಾ' ಕಾದಂಬರಿಗೂ ಒಂಬತ್ತು ವರುಷಗಳ ಅಂತರವಿದೆ. ಈ ಅಂತರದಲ್ಲಿ ಸಮಾಜ ಸುಧಾರಕರಲ್ಲಿ ಮತ್ತು ಸಮಾಜದಲ್ಲಿ ಆಗಿದ್ದ ಸೂಕ್ಷ್ಮ ಬದಲಾವಣೆಯನ್ನು ಕೆರೂರು ಅವರು ಗುರುತಿಸುತ್ತಾರೆ. ಸ್ವತಃ ಸನಾತನ ಧರ್ಮದ

ಸಮುದ್ರದಲ್ಲಿ ಕಡೆದ ಮೂರ್ತಿ ಆಗಿದ್ದ ಕಾರಣ ಪರಂಪರೆಯ ಮೌಲ್ಯಗಳ ಸ್ಥಾಪನೆಯೇ ಇವರ ಉದ್ದೇಶವಾಗಿರುವುದು ಕಾದಂಬರಿಯಲ್ಲಿ ವಿದಿತವಾಗುತ್ತದೆ. ಇವರ ಕಾದಂಬರಿಯ ತಳಹದಿಯೇ ಆದರ್ಶ ಪರಂಪರೆಯ ಪುನರುಜ್ಜೀವನ. ಈ ಕಾದಂಬರಿಯಲ್ಲಿಯೂ ವಿಧವಾ ಸಮಸ್ಯೆ, ಬಾಲ್ಯವಿವಾಹ, ಸ್ತ್ರೀ ಶಿಕ್ಷಣ ಚರ್ಚಿತ ವಿಷಯಗಳು. ಆದರೆ ಇದರ ಮುಖ್ಯ ನೆಲೆಯಾಗಿ ನಿಲ್ಲುವುದು ಇಂದಿರೆ ಮತ್ತು ರಮಾಕಾಂತರ ಪ್ರೇಮ ಕಥೆ. ಇವರೆ ಕೆರೂರು ಅವರ ಆದರ್ಶ ಕಲ್ಪನೆಯ ಪಾತ್ರಗಳು. ಈ ಆದರ್ಶ ಪಾತ್ರಗಳಿಂದಲೇ ಭಾರತೀಯ ಪರಂಪರೆಯ ಸಮರ್ಥನೆ.

'ದೇವಯಾನಿ' ಪಾತ್ರವು ಕಾದಂಬರಿಯ ಆದರ್ಶವೆ. ಬಾಲ್ಯ ವಿವಾಹಕ್ಕೆ ಒಳಗಾಗಿದ್ದ ದೇವಯಾನಿ ಹದಿನಾಲ್ಕನೆಯ ವಯಸ್ಸಿಗೆ ವಿಧವೆ ಆಗುತ್ತಾಳೆ. ಅಪ್ಪನ ಸಹಕಾರದಿಂದ ಶಿಕ್ಷಣವನ್ನು ಪಡೆದು ರೂಪವಂತೆ ಎಂಬ ಮಾತಿನ ಜೊತೆ ಬುದ್ಧಿವಂತೆ ಎನಿಸಿಕೊಳ್ಳುತ್ತಾಳೆ .ಈ ನಡುವೆ ದೇವಯಾನಿ ಮತ್ತು ನವರಸಪುರದ ಕಮಲಾಕಾಂತ ಪರಸ್ಪರ ಅನುರಕ್ತರಾಗುತ್ತಾರೆ. ಕಮಲಕಾಂತನ ಸ್ನೇಹಿತ ಜಯರಾಯನ ಮಾನಸಿಕ ಕ್ರೌರ್ಯದಿಂದ ದೇವಯಾನಿ ಜೀವನಪೂರ್ತಿ ವಿಧವೆಯಾಗಿಯೇ ಮನೋನಿಗ್ರಹದಿಂದ ಜೀವನ ನಡೆಸುವ ಸಂದರ್ಭ ರೂಪುಗೊಳ್ಳುತ್ತದೆ. ಕಾದಂಬರಿಯಲ್ಲಿ ದೇವಯಾನಿಯ ಪ್ರತಿಭಟನಾತ್ಮಕ ಅಥವಾ ವಿರೋಧಾತ್ಮಕವಾದ ಹೇಳಿಕೆಯನ್ನಾಗಲಿ, ಘಟನೆಗಳನ್ನಾಗಲಿ ನೋಡಲು ಸಾಧ್ಯವಿಲ್ಲ. ಆದರೆ ಆಕೆಯ ಕಣ್ಣೀರು, ತಳಮಳಗಳು ಮೌನವಾಗಿ ಅಥವಾ ತಿರಸ್ಕಾರವಾಗಿ ತಣ್ಣನೆಯ ಪ್ರತಿರೋಧ ಪುರುಷರ ಸ್ವಾರ್ಥವನ್ನ ಟೀಕಿಸದೆ ಇರಲಾರದು. ಇಂತಹ ಪಾತ್ರವನ್ನು ಪರಂಪರೆಯ ಕಾರಣದಿಂದ ಆದರ್ಶ ನೆಲೆಯಲ್ಲಿ ಚಿತ್ರಿಸಿ ವಿಧವಾ ವಿವಾಹಕ್ಕೆ ಅವಕಾಶ ಕೊಡದೆ ಇರುವುದು ಕಾದಂಬರಿಯ ದುರಂತ ಎನಿಸುತ್ತದೆ. ಇಂಥದ್ದೆ ಮತ್ತೊಂದು ಪಾತ್ರ ಮದ್ದೂರು ಸಾವಿತ್ರಮ್ಮ. ವಿಧವೆ, ಜೊತೆಗೆ ಬಡವೆ. ಇರುವ ಒಬ್ಬ ಮಗ ಮದ್ದೂರ ನಟೇಶ. ಅನಕ್ಷರಸ್ಥಳಾದರೂ ಸ್ವಾಭಿಮಾನಿ. ಸಮಾಜದ ಆಗು–ಹೋಗಗಳ ಯಾವುದೇ ಅರಿವಿಲ್ಲದ ಮುಗ್ಧೆ. ಕೊನೆಗೆ ಬಡತನದ ಬೇಗುದಿಯಲ್ಲಿಯೇ ಅನಾಥಳಾಗಿ ಪ್ರಾಣ ಬಿಡುತ್ತಾಳೆ .ಇದು ಕೂಡ ಕಾದಂಬರಿಯ ಮತ್ತೊಂದು ದುರಂತ. ಏಕೆಂದರೆ ಇಬ್ಬರೂ ಬದುಕಿನ ರೀತಿಯಿಂದ ವಂಚಿತರೆ. ಈ ಎರಡು ಪಾತ್ರಗಳಿಗೆ ತದ್ವಿರುದ್ಧವಾಗಿ ಆಧುನಿಕತೆಯ ಮೂರ್ತಿಗಳಾಗಿ ನಿಲ್ಲುವ ಪಾತ್ರಗಳು ಪಂಡಿತೆ ರಾಧಾಬಾಯಿ ಮತ್ತು ಕಮಲೆ. ಸಮಾಜ ಸುಧಾರಕರ ಪ್ರಭಾವಕ್ಕೆ ಸಂಪೂರ್ಣ ಒಳಗಾದವರು. ಹೀಗಾಗಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಸ್ತ್ರೀ ಸ್ವತಂತ್ರವನ್ನು ಅತೀವವಾಗಿ ಪ್ರತಿಪಾದಿಸುವ ಆಧುನಿಕ ಮನೋಭಾವದವರು. ಪಶ್ಚಿಮದ ವಿಚಾರಗಳಿಗೆ ಮಾರುಹೋಗಿ ಅದರಂತೆ ನಡೆಯ ಬಯಸಿ ಸನಾತನ ಧರ್ಮದಲ್ಲಿದ್ದ ಅರ್ಥಹೀನ ಆಚರಣೆಗಳಿಂದ ದೂರವೆ ನಿಂತವರು. ಸ್ವತಃ ರಾಧಾಬಾಯಿ ಮೂರು ಮದುವೆಯನ್ನ ಆದವಳು. ಹೀಗಾಗಿ ಅವಳ ಸಂಸಾರಿಕ ಜೀವನ ಹಾಸ್ಯಾಸ್ಪದವು ಆಗಿ ಚಿತ್ರಣಗೊಂಡಿದೆ. ಕಮಲೆನೂ ವಿಧವೆ ಮತ್ತು ತರುಣಿ ಮತ್ತೊಂದು ವಿವಾಹಕ್ಕೆ ಸಿದ್ಧಳು. ಮಹಿಳಾ ಸಮಾಜವನ್ನು ಸ್ಥಾಪಿಸಿ

ಮಹಿಳೆಯರ ಸಮಸ್ಯೆಯನ್ನು ಎದೆಗಾರಿಕೆಯಿಂದ ಚರ್ಚೆ ಮಾಡುವಂಥವರು .ಆದರೆ ಇವರಿಬ್ಬರನ್ನು ಕಾದಂಬರಿಕಾರರು ಗೌರವಕ್ಕೆ ಅರ್ಹವೇ ಅಲ್ಲ ಎಂಬಂತೆ ಆರಂಭದಿಂದ ಅಂತ್ಯದವರೆಗೂ ಚಿತ್ರಿಸಿದ್ದಾರೆ .ಇವರ ಮೂಲಕವಾಗಿಯೇ ಬಂಗಾಲ ಪ್ರಾಂತ್ಯದ ಸುಧಾರಣೆ, ಕೇಶವ ಚಂದ್ರಸೇನರ ಬ್ರಹ್ಮೋಪಂಥ, ಆರ್ಯಸಮಾಜ, ಉಪಾಸನಾ ಸಮಾಜಗಳ ಉಲ್ಲೇಖವೂ ಕಾಣಿಸಿಕೊಂಡಿದೆ. ಆದರೆ ಇವುಗಳ ಉಲ್ಲೇಖ ಸುಧಾರಣಾವಾದವನ್ನು ಪರಿಚಯಿಸಲು,ಬಿಂಬಿಸಲು ಬಳಕೆಗೊಂಡಿಲ್ಲ ಬದಲಿಗೆ ವಿಡಂಬನೆಗೆ, ಟೀಕೆಗೆ ಆಧಾರವಾಗಿ ಬರುತ್ತವೆ. ಆಧುನಿಕ ಸುಧಾರಣವಾದವನ್ನು ಜರೆಯುವ ಹುಮ್ಮಸಿನಲ್ಲಿ ಕಾಂದಬರಿಕಾರರು ಹೆಣ್ಣಿನ ಸ್ವತಂತ್ರವನ್ನು ಸಂಪೂರ್ಣ ಅಲ್ಲಗಳೆದಿದ್ದಾರೆ. ಈ ಭರದಲ್ಲಿಯೇ ರಾಧಾಬಾಯಿಯನ್ನ ಪತಿಯರ ಶಿರೋಮಣಿ ಎಂದೂ, ಕಮಲೆಯನ್ನ ಅತ್ಯಾಚಾರ ನಡತೆಯ ಹೆಂಗಸೆಂದು ಬಹಳ ತುಚ್ಛವಾಗಿ ಕರೆದಿರುವುದು ವಿಪರ್ಯಾಸವೆ ಸರಿ.

ಕಾದಂಬರಿಯಲ್ಲಿ ಚತುರೆ, ಬುದ್ಧಿವಂತೆ, ಸ್ನೇಹ ಜೀವಿಯಾಗಿ ಚಿತ್ರಣಗೊಂಡಿರುವ ಪಾತ್ರ ‘ಇಂದಿರೆ’. ಇವಳೇ ಕಾದಂಬರಿಯ ಜೀವಾಳ. ಹಿಂದೂ ಪರಂಪರೆ ಮೌಲ್ಯಗಳ ಆದರ್ಶದ ರೂಪ. ಹೀಗಾಗಿ ಸಂಪ್ರದಾಯ ವಾದಿಗಳಿಗೆ ನೆಚ್ಚಿನ ಪಾತ್ರ, ಈಕೆಯ ಸಂಯಮ, ತಾಳ್ಮೆ, ವಿಚಾರ ಶಕ್ತಿಗಳು ಪ್ರೀತಿಯಲ್ಲಿ ಗೆಲ್ಲುವನ್ನು ಪಡೆಯಲು ಸಾಧ್ಯವಾಗುತ್ತವೆ. ಇದು ಸಾಧ್ಯವಾದುದು ಭಾರತದ ಸನಾತನ ಧರ್ಮವನ್ನು ಪ್ರತಿಪಾದಿಸುವ ಪುರಾಣ ಗ್ರಂಥಗಳ ಪಠಣದಿಂದ. ಮಹಾಭಾರತ, ರಾಮಾಯಣ, ಲಕ್ಷ್ಮೀಶಭಾರತದಂತಹ ಗ್ರಂಥಗಳ ಅಧ್ಯಯನದ ಫಲ ಎಂಬುದು ಕಾದಂಬರಿಕಾರರ ಅಭಿಪ್ರಾಯ. ಪರಂಪರೆಯ ಸಾತ್ವಿಕ ಪ್ರತಿಭೆಯಾದ ಇವಳಿಗೆ ಆಧುನಿಕ ಶಿಕ್ಷಣದ ಬಗ್ಗೆ ಆತಂಕ. “ ಆಧುನಿಕ ಶಿಕ್ಷಣದಿಂದ ಮಾನವೀಯತೆ ಎನ್ನುವುದು ಈಗಿನ ತರುಣ– ತರುಣಿಯರಲ್ಲಿ ಮಾಯವಾಗುತ್ತಿದೆ ನಿಜವೇ?” ಎಂಬ ಅನುಮಾನ ಆಕೆಯಲ್ಲಿ ಹುಟ್ಟುವುದು ಓದುಗರಿಗೆ ಸಹಜವಾದುದು ಎಂದೆನಿಸುವುದಿಲ್ಲ. ಏಕೆಂದರೆ ಕೆರೂರು ಅವರಿಗೆ ಆಧುನಿಕ ಶಿಕ್ಷಣದ ಸುಧಾರಣಾ ನೀತಿಗಳು ರುಚಿಸುವುದಿಲ್ಲ. ಶಿಕ್ಷಣ ಬೇಕು ಅದು ಉತ್ತಮ ಗುಣಗಳ ಮೇಲೆ ಕಟ್ಟಿರುವ ಸೌಧವಾಗಿರಬೇಕು. ಆ ಸೌಧವೇ ಭಾರತೀಯ ಪರಂಪರೆಯ ಮೌಲ್ಯಗಳು ಎಂಬುದನ್ನು ಇಂದಿರೆಯ ಮೂಲಕ ಸಾಧಿಸಲು ಹೊರಟಿದ್ದಾರೆ. ಹೀಗಾಗಿ ಇಂದಿರೆ ಸಹಜವಾಗಿ ವರ್ತಿಸುತ್ತಾಳೆ ಎಂದು ಓದುಗರಿಗೆ ಅನಿಸುವುದಿಲ್ಲ.

ಕಾದಂಬರಿಯಲ್ಲಿ ‘ಇಂದಿರೆ’ ರೂಪ ಲಾವಣ್ಯದಲ್ಲಿ ಅತಿಶಯಳು, ಸಜ್ಜನಿಕೆ, ಪ್ರೇಮಮಯಿ, ನಿರ್ಮಲ ಅಂತಃಕರಣದವಳು, ಚತುರೆ ಎಂದು ಸಂಪೂರ್ಣ ಉತ್ತಮ ಭಾವದಲ್ಲೇ ರೂಪುಗೊಂಡಿದ್ದಾಳೆ. ಹಾಗೆಯೇ ಇಂದಿರೆಯ ಬದುಕು ಬಹಳವೇ ಸರಾಗವಾಗಿ ನಡೆದು ಬಿಡುತ್ತದೆ. ಕೇವಲ ಅವಳ ರೂಪ ಮತ್ತು ಮಾತಿನ ಚಾತುರ್ಯವಷ್ಟೇ ಓದುಗರಿಗೆ ಆಕರ್ಷಣೆ ಅದರಾಚೆ ಆಕೆಯ ಸಮಸ್ಯಾ ಬದುಕು ಕಾಣಸಿಗುವುದಿಲ್ಲ. ಶ್ರೀಮಂತ ಮನೆತನದಲ್ಲಿ ಏಕಮಾತ್ರ ಪುತ್ರಿಯಾಗಿ ಎಲ್ಲ ಸವಲತ್ತುಗಳ ನಡುವೆ ಬೆಳೆದ

ಇಂದಿರೆಗೆ ಹೆಣ್ಣಿನ ಸ್ವತಂತ್ರದ ಅವಶ್ಯಕತೆಯ ಮಹತ್ವ ತಿಳಿಯುವುದು ಕಷ್ಟವೇ. ಈ ಕಾರಣದಿಂದಾಗಿಯೇ ಆಕೆ ಹೆಣ್ಣಿಗೆ " ಸ್ವತಂತ್ರದ ಅವಶ್ಯಕತೆ" ಏನಿದೆ, ದುಡಿದು ಬರುವ ಗಂಡಸರಿಗೆ ಸರಿಸಮಾನವಾಗಿ ನಿಲ್ಲುವ ಅವಶ್ಯಕತೆ ಹೆಣ್ಣಿಗೆ ಇಲ್ಲ. ಇವರ ಸೇವೆಯೇ ಹೆಣ್ಣಿಗಿರುವ ಭಾಗ್ಯ ಎಂದು ಹೇಳುವ 'ಇಂದಿರೆ', 'ಇಂದಿರಾಬಾಯಿ'ಗೆ ತದ್ವಿರುದ್ಧಳು. ರಮಾಕಾಂತನ ಅಭಿಪ್ರಾಯದಂತೆ. " ಸ್ತ್ರೀಯರು ಉಚ್ಚ ಪ್ರತಿಯ ಶಿಕ್ಷಣ ಹೊಂದುವುದು ಅವಶ್ಯ; ಅವರ ಸ್ವಾತಂತ್ರ್ಯಾತಿಶಯವು ಮಾತ್ರ ನನಗೆ ಸಹಿಸದು" ಎಂಬ ಮಾತು ಹೆಣ್ಣಿಗಿರುವ ಅತಿಶಯವಾದ ಸ್ವಾತಂತ್ರ್ಯ ಯಾವುದು ಎಂಬ ಪ್ರಶ್ನೆ ಹುಟ್ಟುವಂತೆ ಮಾಡುತ್ತದೆ. ಆದರೆ ಇದು ಅಂದಿನ ಸಮಾಜದ ಬಹುಪಾಲು ಸಮಾಜ ಸುಧಾಕರಲ್ಲಿ ಮತ್ತು ಶ್ರೀ ಸಾಮಾನ್ಯರಲ್ಲಿ ಇದ್ದಂತಹ ನಿಲುವು ಕೂಡ ಹೌದು .ಪ್ರಸ್ತುತದಲ್ಲಿಯೂ ಈ ವಿಷಮ ನಿರ್ಧಾರಗಳು ಪುರುಷರಲ್ಲಿ ವ್ಯಕ್ತವಾಗುತ್ತಿರುವುದು ಸರ್ವೇ ಸಾಮಾನ್ಯವಾಗಿದೆ.

ಈ ನಡುವೆ ಇಂದಿರೆಯ ಅಪ್ಪ ಜಯರಾಯನು "ಬಹದ್ದೂರ" ಬಿರುದ್ದನ್ನ ಪಡೆಯುವ ಸಲುವಾಗಿ ಶ್ರೀಕಂಠಬಹದ್ದೂರನ ಜೊತೆ ಮದುವೆ ನಿಶ್ಚಯ ಮಾಡಿದ್ದ ಸಂದರ್ಭದಲ್ಲಿ ಜಾಣ್ಮೆಯಿಂದ ಪರಿಸ್ಥಿತಿಯನ್ನ ನಿಭಾಯಿಸಿ, ತಾನು ಪ್ರೀತಿಸಿದಂತಹ ರಮಾಕಾಂತನನ್ನೇ ಮದುವೆ ಆಗುವುದರೊಂದಿಗೆ ಕಾದಂಬರಿ ಸುಖಾಂತ್ಯವಾಗುತ್ತದೆ. ಹೀಗೆ ಕಾದಂಬರಿಯೊಳಗೆ ಮಹಿಳಾ ಶಿಕ್ಷಣದ ಬಗ್ಗೆ ಒಲವು ಇದ್ದರೂ, ಸ್ತ್ರೀ ಸ್ವಾತಂತ್ರ್ಯಕ್ಕೆ ಯಾವುದೇ ಬೆಲೆಯಿಲ್ಲ. ವಿಧವಾವಪನಕ್ಕೆ ವಿರೋಧವಿದ್ದರೂ, ವಿಧವೆಯ ಮರುಮದುವೆಗೆ ಸಂಪೂರ್ಣ ಒಪ್ಪಿಗೆಯಿಲ್ಲ ಎಲ್ಲವೂ ದಂದ್ವವೆ. ಹೀಗೆ ಆರಂಭದ ಕಾಲದ ಕಾದಂಬರಿಯಲ್ಲಿ ಪೂರ್ವ – ಪಶ್ಚಿಮವನ್ನು ಬೆಸೆಯುವ ಸಂದರ್ಭದಲ್ಲಿ ಪರ–ವಿರೋಧಗಳು ವ್ಯಕ್ತವಾಗಿರುವುದು ಒದು ಸಮಾಜದ ಸಾಮಾಜಿಕ ಕಳಕಳಿ ಎಂದೆನಿಸಿದರೂ ಆದರ ಸತ್ಯಾಸತ್ಯತೆಗಳು ಅಷ್ಟೇ ಮುಖ್ಯ ಎನಿಸುತ್ತವೆ. ಏಕೆಂದರೆ ಗಂಡು ಸೃಷ್ಟಿಸಿರುವ ಹೆಣ್ಣಿನ ಬದುಕು ಹೇಗೆ ಸವಾಲಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಪುರುಷರು ಬದುಕಿನಿಂದ ಕಾರಣ– ವಿನಾಕಾರಣ, ಆಕಸ್ಮಿಕ – ಅನಿವಾರ್ಯಗಳಿಂದಾಗಿ ವಿಮುಖರಾಗದ ಪುರುಷರ ರಚನಾತ್ಮಕ ಸಮಾಜದೊಳಗೆ ಬದುಕಿಗೆ ಅರ್ಥವನ್ನು ಕೊಡುವ ನಿಟ್ಟಿನಲ್ಲಿ ತೋರುವ ಜಾಣ್ಮೆ, ಧೈರ್ಯಗಳೆಲ್ಲವು ಅಗತ್ಯವಾದವುಗಳೆ. ಇಂತಹ ಸಂದರ್ಭಗಳಲ್ಲಿ ಮಹಿಳೆಯರಿಗೆ ಸ್ವತಂತ್ರದ ಅತಿಶಯ ಎಂದರೇನು? ಮಹತ್ವಾಕಾಂಕ್ಷೆಯ ಅರ್ಥವೇನು?ಎಂದು ತಿಳಿಯುವುದಕ್ಕಿಂತ ಬದುಕು ಶ್ರೇಷ್ಠವಾಗಿ ನಿಂತು ಬಿಡುತ್ತದೆ. ಇದುವೆ ಮಹಿಳೆಯರ ಜೀವನದ ವೈಖರಿ ಇದು ಒಂದು ನಿರ್ದಿಷ್ಟ ಕಾಲಕ್ಕೆ ಸೀಮಿತವಾದುದ್ದಲ್ಲ ಪ್ರತಿ ಕಾಲಕ್ಕೂ ಅನ್ವಯಿಸುವಂಥದ್ದು. ಕಳೆದ ಬಾರಿ ಪ್ರಬಂಧ ಮಂಡನೆಯಲ್ಲಿ ಕೇಳಿ ಗ್ರಹಿಸಿದಂತೆ ಜವನಕ್ಕನ ಅದಮ್ಯ ಜೀವನದ ಪ್ರೀತಿಯ ಜೊತೆಗೆ ಗಂಡಿಗೆ ಬದುಕಿನಲ್ಲಿ ಆಯ್ಕೆಗೆ ಅವಕಾಶವಿರುವಂತೆ ಹೆಣ್ಣಿಗೂ ಎಲ್ಲಾ ರೀತಿಯಿಂದಲೂ ಬದುಕಿನ ಆಯ್ಕೆಗೆ ಸಂಪೂರ್ಣ ಹಕ್ಕಿದೆ ಎಂದು ನಿರೂಪಿಸುವ ಕಾದಂಬರಿಕಾರರ ಆಲೋಚನೆ 'ಶೃಂಗ'ವೆ ಸರಿ. ಸಮಕಾಲೀನ ಸಂದರ್ಭದ ಮಹಿಳೆ ಪುರುಷನಷ್ಟೇ ನಿರ್ಧಾರ, ಆಲೋಚನೆ,

ಅಭಿವ್ಯಕ್ತಿಗಳಲ್ಲಿ ಸರಿಸಮಾನಳು ಎಂದು ಗುರುತಿಸಿರುವುದು ಉತ್ತಮವೆ ಸರಿ. ಹಾಗೇಯೇ ಪುರುಷನಿಗೆ ಸಮಾನವಾಗಿಯೇ ಮಹಿಳೆ ಸಮಾಜದಲ್ಲಿ ಸಮರ್ಥಜೀವಿ ಎಂಬುದುನ್ನ ಇಡೀ ಕಾದಂಬರಿ ಸಮರ್ಥಿಸುತ್ತದೆ. 21ನೇ ಶತಮಾನದಲ್ಲಿಯೂ ಮಹಿಳಾ ನೆಲೆಯಲ್ಲಿಯೇ ಬದುಕನ್ನು ಕಟ್ಟುವ ಅಥವಾ ರೂಪಿಸುವ ಕಾರ್ಯ ಅನಿವಾರ್ಯತೆಯಿಂದಲ್ಲೇ ಕೂಡಿರುವಂಥದ್ದು. ನಮ್ಮ ಹೆಜ್ಜೆಯೊಂದಿಗೆ ಹೆಜ್ಜೆ ಸೇರಿಸುತ್ತಿರುವ ಈ ಹೊತ್ತಿನಲ್ಲಿ ಹರಿಯಾಣ, ಮಣಿಪುರ, ಆಫ್ಘಾನಿಸ್ತಾನ, ಸೌದಿ ಅರೇಬಿಯಾದಲ್ಲಿರುವ ಸಮಾಜ ವ್ಯವಸ್ಥೆ ಈಗಲು ಪುರುಷ ನಿರ್ಮಿತದ ಉತುಂಗ ಸ್ಥಿತಿಯಲ್ಲಿದೆ ಎಂಬುದು ವಿಷಾದದ ಸಂಗತಿ.

## ಪರಾಮರ್ಶನ ಗ್ರಂಥಗಳು


**1.** ಇಂದಿರಾಬಾಯಿ– ಗುಲ್ವಾಡಿ ವೆಂಕಟರಾವ್, ವಸಂತ ಪ್ರಕಾಶನ, 2013

2. ಇಂದಿರಾ –ಕೆರೂರ ವಾಸುದೇವಾಚಾರ್ಯ,ಕನ್ನಡ ಸಾಹಿತ್ಯ ಪರಿಷತ್ತು ,2013

3. ನಾಡು–ನುಡಿಯರೂಪಕ–ಶಿವರಾಮಪಡಿಕ್ಕಲ್,ಪ್ರಸಾರಾಂಗ,ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ,2001

4. ಆಧುನಿಕ ಭಾರತದಲ್ಲಿ ಮಹಿಳೆ – ಎಚ್.ಎಸ್.ಶ್ರೀಮತಿ(ಅನುವಾದ) ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, 2012

5. ಹೊಸಗನ್ನಡ ಅರುಣೋದಯ – ಶ್ರೀನಿವಾಸ ಹಾವನೂರು, ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು, 2001

6. ಹೊಸಗನ್ನಡ ಸಾಹಿತ್ಯ ಚರಿತ್ರೆ –ಎಲ್ ಎಸ್ ಶೇಷಗಿರಿ ರಾವ್,ಅಂಕಿತ ಪುಸ್ತಕ,2010

7. ಕನ್ನಡ ಕಥನ ಸಾಹಿತ್ಯ:ಕಾದಂಬರಿ– ಡಾ ಜಿ.ಎಸ್ಆಮೂರ, ಸಪ್ನ ಬುಕ್ ಹೌಸ್ .ಬೆಂಗಳೂರು, 2013